



ಮಧುರಾ ಕರ್ಣಮ್

ಮೆಟ್ಟಿಲಿಳಿದು ದೇವಸ್ಥಾನದ ದ್ವಾರದ ಬಳಿ ಬರುವಾಗ ಪುಟ್ಟ ಕರೀ ಬೆಕ್ಕೊಂದು ಕಣ್ಣು ಮುಚ್ಚಿಕೊಂಡು ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತಿತ್ತು. ಈಶ್ವರನಿಗೆದುರಾಗಿ ದ್ವಾರದ ಹೊರಗೆ... ನಂದಿಯ ಹಿಂದೆ... ಥೇಟ್ ನಂದಿಯಂತೆಯೇ... ಎಂದೂ ಕಂಪಿಸದ ನನ್ನ ಕಾಲುಗಳು ಇಂದು ಕಂಪಿಸಿದವು. ಅದನ್ನು ದಾಟಿ ಮುಂದೆ ಹೋಗುವದೋ ಬೇಡವೋ ಎಂಬ ಜಿಜ್ಞಾಸೆ ಕಾಡಿತು. ಫಕ್ಕನೆ ನಗು ಬಂತು. ಒಳ್ಳೆಯ ಕಾರ್ಯ ಮಾಡುವಾಗ ಎಂದೂ ಶಕುನ ನೋಡದವ ಇಂದು ಅಕಾರ್ಯ ಮಾಡಲು ಹೊರಟಾಗ ಅದರ ಗೊಡವೆಯೇಕೆ? ಎಂದು ತಲೆ ತುರಿಸಿಕೊಂಡೆ. ಆದರೆ ಅಕಾರ್ಯವಾದರೂ ನಿರ್ವಿಘ್ನವಾಗಿ ಪಾರಾಗಬೇಕಲ್ಲ ಎನಿಸಿ ಆರಂಭಿಸುವದಕ್ಕೆ ಮುನ್ನವೇ ದೇವರ ಆಶೀರ್ವಾದ ಬೇಡಲು ಬಂದಿದ್ದೆ. 'ನಾನೇನು ದುರಾಸೆಯಿಂದ ಮಾಡುತ್ತಿಲ್ಲವಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಇದು ನನಗೆ ಅನಿವಾರ್ಯ. ಅವ್ವ ನೊಂದುಕೊಳ್ಳಬಹುದು. ಅಕ್ಕ, ಅಣ್ಣ ನಾಲ್ಕು ದಿನ ಎಗರಾಡಿ ಮುಂದೆ ಸರಿ ಹೋಗಬಹುದು. ಹೋಗದೆಯೂ ಇರಬಹುದು. ಮಾತನಾಡದಂತೆ ಸಂಬಂಧ ಕಡಿದುಕೊಳ್ಳಬಹುದು. ಆದರೆ ಸಾಲಗಾರರ ಕಾಟ ಕಳೆಯುತ್ತದೆ. ಜೀವನಚಕ್ರ ಉರುಳುತ್ತದೆ. ಬಿಸಿನೆಸ್ ಬೆಳೆದರೆ ಬೆಳೆಸುವದು, ಇಲ್ಲವಾದರೆ ಎಲ್ಲಿಯಾದರೂ ನೌಕರಿ ಹಿಡಿದು... ಅವ್ವ, ಹೆಂಡತಿ, ಎರಡು ಮಕ್ಕಳನ್ನೊಳಗೊಂಡ ಸಂಸಾರದ ತೇರನ್ನೆಳೆಯುವದು' ಎಂದುಕೊಳ್ಳುತ್ತ ಬೆಕ್ಕನ್ನು ನಿರುಕಿಸಿದೆ. ಅದೂ ಒಂದೇ ಕಣ್ಣು ತೆರೆದು 'ನನ್ನ ಕೆಲಸವನ್ನು ನೀನು ಮಾಡುತ್ತಿದ್ದೀಯಾ' ಎನ್ನುವ ಪರಿಯಲ್ಲಿ ನನ್ನತ್ತ ನೋಡಿ ಮತ್ತೆ ಕಣ್ಣು ಮುಚ್ಚಿಕೊಂಡಿತು.

ಚಿತ್ರಗಳು: ಎಂ.ಎಸ್. ಶ್ರೀಕಂಠ ಮೂರ್ತಿ